# ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಬೆಂಗಳೂರು-560023

ಸಂಖ್ಯೆ: ಎಲ್‌ಆರ್‌ಓ/173/2019-20 ದಿನಾಂಕ: 03.07.2021

## ಸುತ್ತೋಲೆ

ವಿಷಯ:- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಚೇರಿ ಅಧೀಕ್ಷಕರುಗಳಿಗೆ ಸಹಾಯಕ ಆಡಳಿತಾಧಿಕಾರಿ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ:-
1. ನಿರ್ದೇಶನಾಲಯದ ಅಂತಿಮ ಜೇಷ್ಠತಾ ಪಟ್ಟಿಯ ಅಧಿಕೃತ ಜ್ಞಾಪನಾ ಪತ್ರ ಸಂ: :ಲಿಪಿಕ(1)190/2019-20, ದಿನಾಂಕ:29.02.2020.
2. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಎಲ್‌ಆರ್‌ಓ/173/2019-20 ದಿ: 29.02.2020.
3. ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಸಂಖ್ಯೆ: ಎಲ್‌ಆರ್‌ಓ/173/2019-20 ದಿ: 29.07.2020 ಮತ್ತು 12.08.2020

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ, ಕಲ್ಯಾಣ-ಕರ್ನಾಟಕ ಹಾಗೂ ಕಲ್ಯಾಣ-ಕರ್ನಾಟಕ ಹೊರತುಪಡಿಸಿದ ಭಾಗದಲ್ಲಿ ಕಚೇರಿ ಅಧೀಕ್ಷಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಉಲ್ಲೇಖ(1)ರ ಅಂತಿಮ ಜೇಷ್ಠತಾ ಪಟ್ಟಿಯಂತೆ ಈ ಕೆಳಕಂಡ ಜೇಷ್ಠತಾ ಸಂಖ್ಯೆಯ ಅನುಸಾರ (ಈಗಾಗಲೇ, ಸಹಾಯಕ ಆಡಳಿತಾಧಿಕಾರಿ ಹುದ್ದೆಗೆ ಪದೋನ್ನತಿ ಪಡೆದು ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಹೊರತುಪಡಿಸಿ) ಅರ್ಹ ಕಚೇರಿ ಅಧೀಕ್ಷಕರುಗಳಿಗೆ, ಸಹಾಯಕ ಆಡಳಿತಾಧಿಕಾರಿ ಹುದ್ದೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಸ್ಥಾನಪನ್ನ ಪದೋನ್ನತಿ ನೀಡುವ ಸಲುವಾಗಿ ದೃಢಿಕೃತ ಶೈಕ್ಷಣಿಕ ವಿದ್ಯಾರ್ಹತೆ ದಾಖಲಾತಿಗಳೊಂದಿಗೆ ಅನ್ವಯವಾಗುವ ಸಾಲಿನ ಕಾರ್ಯನಿರ್ವಾಹಣಾ ವರದಿ ಮತ್ತು ಇತರೆ ಅರ್ಹ ದಾಖಲಾತಿಗಳನ್ನು ನಿಗಧಿತ ದಿನಾಂಕದ ಒಳಗೆ ಸಲ್ಲಿಸುವುದು.

| | | |
|---|---|---|
| | **ಕಲ್ಯಾಣ ಕರ್ನಾಟಕ ಭಾಗದ ನೌಕರರು** | |
| 01 | ಸಾಮಾನ್ಯ ವರ್ಗ/ಪ.ಜಾ/ಪ.ಪಂ | ಜೇಷ್ಠತಾ ಸಂಖ್ಯೆ 01 ರಿಂದ 50 |
| | **ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ ನೌಕರರು** | |
| 01 | ಸಾಮಾನ್ಯ ವರ್ಗ/ಪ.ಜಾ/ಪ.ಪಂ | ಜೇಷ್ಠತಾ ಸಂಖ್ಯೆ 01 ರಿಂದ 360 |

1. ಐದು ವರ್ಷಗಳ ಕಾರ್ಯನಿರ್ವಾರ್ಹಣ ವರದಿ ನಿಗಧಿತ ನಮೂನೆ (4,5,6 ಮತ್ತು 7 ನಿಯಮ) ಭಾಗ-1 ವೈಯಕ್ತಿಕ ಮಾಹಿತಿ. ಭಾಗ-2 ಸ್ವಯಂ ಮೌಲ್ಯ ಮಾಪನ, ಭಾಗ-3 ವರದಿ, ಭಾಗ-4 ಪುನತಾವಲೋಕನ ಭಾಗ-5 ಅಂಗೀಕಾರ, ಭಾಗ-6 ಸಂವಹನ (2016-17, 2017-18, 2018-19, 2019-20, 2020-21 ರವರಗೆ ಪ್ರತಿ ವರ್ಷಕ್ಕೆ ಪ್ರತ್ಯಕವಾಗಿ ಸಲ್ಲಿಸಿಸುವುದು. (ನಿಗಧಿತ ಮಾದರಿಯ ನಮೂನೆಯಲ್ಲಿ ಸಲ್ಲಿಸದ ಕಾರ್ಯನಿರ್ವಹಣಾ ವರದಿಗಳನ್ನು ತಿರಸ್ಕರಿಸಲಾಗುವುದು.)
2. ಪದೋನ್ನತಿಗೆ ಅರ್ಜಿ ಸಲ್ಲಿಸುವಾಗ ಕಡ್ಡಾವಾಗಿ ಜೇಷ್ಠತಾ ಸಂಖ್ಯೆ ನಮೂದಿಸುವುದು.
3. ನೇಮಕಾತಿ ಆದೇಶ.
4. ಈ ಹಿಂದಿನ ಹುದ್ದೆಯ ಪದೋನ್ನತಿ ಆದೇಶ ಪ್ರತಿ.
5. ಖಾಯಂ ಪೂರ್ವಾ ಸೇವಾವಧಿ ಘೋಷಣೆಯ ಪ್ರತಿ.
6. ಅಕೌಂಟ್ಸ್ ಹೈಯರ್ ಉತ್ತೀರ್ಣರಾದ ಪ್ರಮಾಣ ಪತ್ರ
7. ಎಸ್.ಎಸ್.ಎಲ್.ಸಿ ಅಂಕಪಟ್ಟಿ.

8. ಕನ್ನಡ ಭಾಷೆ ಪರೀಕ್ಷೆಯ ಪ್ರಮಾಣ ಪತ್ರ. ಅಥವಾ ಎಸ್.ಎಸ್.ಎಲ್.ಸಿ ಪರಿಕ್ಷೆಯಲ್ಲಿ ಕನ್ನಡ ಭಾಷೆ ಪರೀಕ್ಷೆ ಪಾಸು ಮಾಡಿರುವ ಬಗ್ಗೆ ನಿಗಧಿತ ನಮೂನೆಯ ಕನ್ನಡ ವಿನಾಯಿತಿ ಪ್ರಮಾಣ ಪತ್ರ.
9. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷಾರತಾ ಪರೀಕ್ಷೆ) ನಿಯಮಗಳು-2012 (ತಿದ್ದುಪಡಿ) 2017 ಮತ್ತು 2020 ರಂತೆ ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಗಣಕಯಂತ್ರ ಸಾಕ್ಷಾರತಾ ಪರೀಕ್ಷೆ ಉತ್ತೀರ್ಣರಾಗಿರುವ ಅಂಕಪಟ್ಟಿ/ಪ್ರಮಾಣ ಪತ್ರ.
10. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಇತ್ತೀಚಿನ ಪ್ರಮಾಣ ಪತ್ರ ಹಾಗೂ ಈ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿರುವ ನಕಲು ಪ್ರತಿ ಮತ್ತು ಸೇವೆಗೆ ಸೇರುವಾಗ ಯಾವ ವರ್ಗದಡಿ ನೇಮಕಾತಿಗೊಂಡಿರುತ್ತಾರೆ.
11. ನೌಕರರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದಮ್ಮೆ/ಲೋಕಾಯುಕ್ತ/ಭ್ರಷ್ಟಾಚಾರ ನಿಗ್ರಹ ದಳ ಪ್ರಕರಣಗಳು/ನ್ಯಾಯಲಯದ ಪ್ರಕರಣಗಳ ಬಗ್ಗೆ ದೃಢೀಕರಣ.
12. ಕಲ್ಯಾಣ-ಕರ್ನಾಟಕ ಭಾಗದ ಮೀಸಲಾತಿ ಬಯಸುವರು ನಮೂನೆ-ಡಿ ಪ್ರತಿಯನ್ನು ಸಲ್ಲಿಸುವುದು.
13. ಖಾಲಿ ಇರುವ ಸಹಾಯಕ ಆಡಳಿತಾಧಿಕಾರಿ ಹುದ್ದೆಗಳ ವಿವರ.
14. ಈಗಾಗಲೇ ಪದೋನ್ನತಿ ತಿರಸ್ಕರಿಸಿದ ನೌಕರರ ವಿವರವನ್ನು ಸೇವಾ ಪುಸ್ತಕದಲ್ಲಿ ನಮೂದಿಸಿರುವ ಪ್ರತಿ.

**ವಿಶೇಷ ಸೂಚನೆ:- ಈ ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂಖ್ಯೆ: ಎಲ್‌ಆರ್‌ಓ/173/2019-20 ದಿ: 29.02.2020 ರಂತೆ ಎಲ್ಲಾ ಅರ್ಹ ದಾಖಲಾತಿಗಳನ್ನು ಸಲ್ಲಿಸಿರುವ ನೌಕರರು ಮಾತ್ರ ಈಗ ಪದೋನ್ನತಿಗಾಗಿ ಅರ್ಜಿ ಸಲ್ಲಿಸಲು ಇಚ್ಚಿಸಿದ್ದಲ್ಲಿ 2020-21 ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಾಹಣಾ ವರದಿ ಹಾಗೂ ನೌಕರರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ/ಲೋಕಾಯುಕ್ತ/ಭ್ರಷ್ಟಾಚಾರ ನಿಗ್ರಹ ದಳ ಪ್ರಕರಣಗಳು/ ನ್ಯಾಯಲಯದ ಪ್ರಕರಣಗಳ ಬಾಕಿಯ ಮಾಹಿತಿಯನ್ನು ದಾಖಲೆಯೊಂದಿಗೆ ಮಾತ್ರ ಸಲ್ಲಿಸುವುದು. ಅದರೆ ಸದರಿ ನೌಕರರು ಪದೋನ್ನತಿಗೆ ಇಚ್ಚೆ ಇಲ್ಲದಿದ್ದರೆ ಈ ಹಿಂದಿನ ಅರ್ಜಿಯನ್ನು ಪರಿಗಣಿಸುವುದಿಲ್ಲ.**

ಮೇಲ್ಕಂಡ ಎಲ್ಲಾ ಮಾಹಿತಿಯ ದಾಖಲೆಗಳನ್ನು ದೃಢಿಕರಿಸಿ ನಿಗಧಿತ ಅವಧಿಯೊಳಗೆ ಸಲ್ಲಿಸಲು ಆಸ್ಪತ್ರೆ/ಕಛೇರಿಯ ಮುಖ್ಯಸ್ಥರು ಹಾಗೂ ನಿಯಂತ್ರಣಾಧಿಕಾರಿಗಳು ಅಗತ್ಯ ಕ್ರಮವನ್ನು ವಹಿಸತಕ್ಕದ್ದು. ಸದರಿ ಪದೋನ್ನತಿ ಪ್ರಸ್ತಾವನೆಗಳು ಸಕಾಲದಲ್ಲಿ ಮಾಹಿತಿ ಬಾರದೇ ನೌಕರರು ಪದೋನ್ನತಿಯಿಂದ ವಂಚಿತರಾಗಿದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿ/ನಿಯಂತ್ರಣಾಧಿಕಾರಿಗಳೆ ನೇರವಾಗಿ ಜವಾಬ್ದಾರರನ್ನಾಗಿಸಲಾಗುವುದು. ನಿಗಧಿತ ಅವಧಿಯಲ್ಲಿ ಪ್ರಸ್ತಾವನೆ ಸಲ್ಲಿಸದೇ ತಡವಾಗಿ ಬಂದ ಅರ್ಜಿಗಳನ್ನು ಪದೋನ್ನತಿಗೆ ಪರಿಗಣಿಸಲಾಗುವುದಿಲ್ಲ ಮತ್ತು ಈ ಪದೋನ್ನತಿಗೆ ನ್ಯಾಯಲಯಕ್ಕೆ ದಾವೆ ಹೂಡಲು ನೌಕರರು ಕಡ್ಡಾಯವಾಗಿ ನಿಯಮನುಸಾರ ಇಲಾಖೆಯ ಅನುಮತಿ ಇಲ್ಲದೇ ನ್ಯಾಯಲಯಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ, ಹಾಗೂ ನೌಕರರು ಎಲ್ಲಾ ಅರ್ಹ ದಾಖಲಾತಿಗಳನ್ನು ಸಲ್ಲಿಸಿದ ಮಾತ್ರಕ್ಕೆ ಪದೋನ್ನತಿಗೆ ಅರ್ಹರು ಎಂದು ಭಾವಿಸುವಂತಿಲ್ಲ.

ಆದ್ದರಿಂದ ಮೇಲಿನ ಎಲ್ಲಾ ಮಾಹಿತಿಯನ್ನು ಸರಿಯಾಗಿ ಪರಿಶೀಲಿಸಿ ಸಂಬಂಧಪಟ್ಟ ನೌಕರರ ಆಸ್ಪತ್ರೆ/ಕಛೇರಿಯ ಮುಖ್ಯಸ್ಥರು ಹಾಗೂ ನಿಯಂತ್ರಣಾಧಿಕಾರಿಗಳು ಪರಿಶೀಲಿಸಿ ದಿನಾಂಕ:13.07.2021 ರ ಸಂಜೆ 05.00 ಗಂಟೆಯ ಒಳಗೆ ಆಡಳಿತಾಧಿಕಾರಿಗಳು (ಸಾಮಾನ್ಯ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, 5 ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023 ಇಲ್ಲಿಗೆ ತಪ್ಪದೆ ಮುದ್ದಾಂ ಸಲ್ಲಿಸಲು ಸೂಚಿಸಿದೆ. ತದನಂತರ ಬಂದ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು

**ವಿಶೇಷ ಸೂಚನೆ:–**

1) Karunadu.karnataka.gov.in/hfw ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುವ ಕಚೇರಿ ಅಧೀಕ್ಷಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸತಕ್ಕದ್ದು.
2) ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುವ ಈ ಸುತ್ತೋಲೆಯನ್ನು ಇಲಾಖೆಯ ಸಂಬಂಧಪಟ್ಟ ಎಲ್ಲಾ ಜಿಲ್ಲಾ ಮಟ್ಟದ / ತಾಲ್ಲೂಕು ಮಟ್ಟದ ಅಧಿಕಾರಿಗಳು, ನಿರ್ದೇಶಕರು ಹಾಗೂ ಡೀನ್, ಸ್ವಾಯತ್ತ ಸಂಸ್ಥೆ, ಜಿಲ್ಲಾ ಶಸ್ತ್ರ ಚಿಕಿತ್ಸಕರು,/ವೈದ್ಯಕೀಯ ಅಧೀಕ್ಷಕರು, ಪ್ರಾಂಶುಪಾಲರು, ಆಕುಕ ತರಬೇತಿ ಕೇಂದ್ರ, ಅಧಿಕಾರಿ ವರ್ಗದವರು ಕಡ್ಡಾಯವಾಗಿ ಪರಿಶೀಲಿಸಿ, ಎಲ್ಲಾ ಸಂಬಂಧಪಟ್ಟ ನೌಕರರ ಗಮನಕ್ಕೆ ತಂದು ಸಹಿ ಮಾಡಿಸಿಕೊಳ್ಳತಕ್ಕದ್ದು.
3) ನೌಕರರ ಗಮನಕ್ಕೆ ತರದೇ ನ್ಯಾಯಾಲಯದ ಪ್ರಕರಣ, ದೂರುಗಳ ದಾಖಲಾದಲ್ಲಿ ಸಂಬಂಧಪಟ್ಟ ಅಧಿಕಾರಿ ವರ್ಗದವರನ್ನು ನೇರ ಹೊಣೆಗಾರರನ್ನಾಗಿಸಿ, ನಿಯಮಾನುಸಾರ ವಿಧಿಸಲಾಗುವ ದಂಡ ಅಥವಾ ಶಿಕ್ಷೆಗೆ ಗುರಿಪಡಿಸಲಾಗುವುದು.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ:–**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು–560001.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು–560023.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು–560009 (ತಮ್ಮ ಅಧೀನದ ಎಲ್ಲಾ ಸ್ವಾಯುತ್ತ ಸಂಸ್ಥೆಗಳಿಗೆ ಕಳುಹಿಸಲು ತಿಳಿಸಲಾಗಿದೆ)
4. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ, ಬೆಂಗಳೂರು (ತಮ್ಮ ಅಧೀನದ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಕಳುಹಿಸ'ಲಾಗಿದೆ)
5. ಅಪರ ನಿರ್ದೇಶಕರು, ಉತ್ತರ ಕರ್ನಾಟಕ ವಿಭಾಗ, ವಿಜಯಪುರ ಜಿಲ್ಲೆ.
6. ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರು, ಬಿ.ಬಿ.ಎಂ.ಪಿ/ಬೆಂಗಳೂರು ವಿಭಾಗ/ಮೈಸೂರು ವಿಭಾಗ/ಬೆಳಗಾವಿ ವಿಭಾಗ/ಕಲಬುರಗಿ ವಿಭಾಗ ಇವರ ಗಮನಕ್ಕೆ ತರುವುದೇನೆಂದರೆ, ನಿಮ್ಮ ಅಧೀನದ ಎಲ್ಲಾ ಅಧಿಕಾರಿಗಳ ಗಮನಕ್ಕೆ ಅಂತರ್ಜಾಲದಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯನ್ನು ಹಾಗೂ ಈ ಸುತ್ತೋಲೆಯನ್ನು ಆಸ್ಪತ್ರೆ/ಕಛೇರಿಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಹಾಗೂ ಸಂಬಂಧಪಟ್ಟ ನೌಕರರಿಗೆ ತಿಳಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದೆ.
7. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಗಮನಕ್ಕೆ ತರುವುದೇನೆಂದರೆ, ಅಂತರ್ಜಾಲದಲ್ಲಿ ಪ್ರಕಟಿಸಿರುವ ಈ ಸುತ್ತೋಲೆಯನ್ನು ತಮ್ಮ ಆದೀನದ ಎಲ್ಲಾ ಆಸ್ಪತ್ರೆ/ಕಛೇರಿಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಿದೆ.
8. ನಿರ್ದೇಶಕರು ಹಾಗೂ ಡೀನ್, ಬೆಂಗಳೂರು/ಮೈಸೂರು/ಮಂಡ್ಯ/ಬಳ್ಳಾರಿ/ಬೆಳಗಾವಿ/ರಾಯಚೂರು/ ಹುಬ್ಬಳ್ಳಿ/ಹಾಸನ/ಬೀದರ್/ಕಾರವಾರ/ಇತರೆ ಸ್ವಾಯುತ್ತ ಸಂಸ್ಥೆಗಳು.......................... ಜಿಲ್ಲೆ.
9. ವೈದ್ಯಕೀಯ ಅಧೀಕ್ಷಕರು, ಜಯನಗರ/ಸರ್.ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ/ಕೆ.ಸಿ.ಜನರಲ್ ಆಸ್ಪತ್ರೆ. ಬೆಂಗಳೂರು
10. ಎಲ್ಲಾ ಪ್ರಾಂಶುಪಾಲರು, ಎ.ಎನ್.ಎಂ ತರಬೇತಿಕೇಂದ್ರ,.................................... ಜಿಲ್ಲೆ
11. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು,..................................................
12. ಎಲ್ಲಾ ಜಿಲ್ಲಾ ಮಲೇರಿಯಾಧಿಕಾರಿಗಳು / ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು.................................................
13. ಎಲ್ಲಾ ಮುಖ್ಯ ಆಡಳಿತಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ..........................
14. ಎಲ್ಲಾ ಆಡಳಿತ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ,.............................................................
15. ಇಲಾಖೆಯ ಎಲ್ಲಾ ಕಚೇರಿ ಅಧೀಕ್ಷಕರುಗಳಿಗೆ,
16. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
17. ಆದೇಶ ಪ್ರತಿ/ ಕಛೇರಿ ಪ್ರತಿ.